ಮೋಡದ ಪ್ರಳಯಾಂತಕ ಮಬ್ಬು ಮೌನ ಮನೆಯೊಳಗೆ ಬಿಮ್ಮನೆ ಉಸಿರುಗಟ್ಟಿ ಕೂತು ಬಿಟ್ಟಿದೆ ಎಂದನಿಸುವುದು. ಗಂಡನ ತೇಪೆಹಾಕಿದ ಹಳೆಯ ಪ್ಯಾಂಟು ಮತ್ತು ಕೊರಳಲ್ಲಿ ಹರಿದ ಅಂಗಿ ನೋಡಿ ಕರುಣೆ ಉಕ್ಕಿ ಸಲೀಲತ್ತೆ, "ಪಾಪ ಒಳ್ಳೆಯವರೇ 'ಅವರು', ಹಣೆಮ್ಯಾಲಿನ ಗೆರೆ ಸದರು" ಸಮಾಧಾನಕ್ಕೆ ಯತ್ನಿಸುವಳು. ಓದಿನಲ್ಲಿ ಹಿಂದಿರುವ ಮಕ್ಕಳ ಮಾನ ಕಾಪಾಡಲು ಸಲೀಲತ್ತೆ ಕೇರಿಯ ಹೆಂಗಸರ ಕುಹಕಕ್ಕೆ, "ಕಾಲೇಜಿಗೆ ಹೋಗಿ ಉದ್ಧಾರ ಮಾಡಿದ್ದು ಗೊತ್ತು. ಯಾರದೊ ಜೊತೆಗೆ ಓಡಿ ಹೋಗಿ ಹೆಸರ ಕೆಡ್ಸಿಕೊಂಡವರದ್ದು ಲಿಸ್ಟು ಬೇಕಾ" ಎಂದು ಪಾಟಿ ಸವಾಲು ಹಾಕುತ್ತಿದ್ದಳು. ಅವಳಿಗೆ ಅರಿವಿಲ್ಲದೆ ಮಾತು ಜಗಳದ ಜಿದ್ದಿಗೆ ಜಿಗಿದು ಬಿಡುತ್ತಿತ್ತು. ಮನೆಯಲ್ಲೆ ಕೂತು ಕಜ್ಜಾಯ ತಯಾರಿಸಿಕೊಡುವ ಕೆಲಸಕ್ಕೆ ಮಗಳಿಬ್ಬರು ಒದಗುತ್ತಾರಲ್ಲ ಎಂದು ಸಂತೈಸಿಕೊಂಡಳು.

ಸಲೀಲತ್ತೆ ಕೆಲ ವರ್ಷಗಳವರೆಗೆ ಕರೆದಲ್ಲಿ ಪಗಾರಿಗೆ ಒಸಗೆ ಅಡಿಗೆ ಕೆಲಸಕ್ಕೆ ಹೋಗುತ್ತಿದ್ದಳು. ಮಗಳಿಬ್ಬರು ಮುಟ್ಟು ಮೀಯಲು ನಿಂತಾಗ ಅವರ ಪ್ರಾಯವನ್ನು ಪಹರೆ ಕಾಯುವಂತೆ ಮುಂಗಡ ಆರ್ಡರ್ ಕೊಟ್ಟವರಿಗೆ ಮನೆಯಿಂದಲೆ ಸ್ವೀಟ್ ತಯಾರಿಸಿ ಕೊಡಲು ಆರಂಭಿಸಿದಳು. ದೊಡ್ಡ ಬಾಂಡಲೆ, ಪಾಕ ತೊಳೆಸಲು ಮರದ ಉದ್ದ ಸಟ್ಟುಗ, ಕಲಾಯಿ ತಿಕ್ಕಿದ ಹಿತ್ತಾಳೆಯ ಬಳೆ ತೋಪು, ಹಿಟ್ಟು ತುಂಬಿರುವ ಫಳಫಳ ಮಿನುಗುವ ತಗಡಿನ ಡಬ್ಬಿಗಳನ್ನು ಅಡ್ಡ ಪಡಿಮಾಡಿನ ಒಲೆಯ ಸನಿಹ ಹುಣಸೆ ಹುಳಿ ತಿಕ್ಕಿ ಮಿಂಚುವಂತೆ ತೊಳೆದಿಡುತ್ತಿದ್ದಳು. ಕೇರಿಯ ಒಸಗೆಗಳಿಗೆ, ಸೊಸೈಟಿಯ ಜನರಲ್ ಮೀಟಿಂಗ್ ನಡೆಯುವಾಗ, ಕಾಂಚಿಕಾಂಬಾ ದೇವಸ್ಥಾನದಲ್ಲಿ ಅಮೆರಿಕದಲ್ಲಿರುವ ಊರ ದಂಪತಿ ನೀಡುವ ಹರಕೆ ಪೂಜೆಯ ಊಟಕ್ಕೆ ಅವಳು ಹೋಳಿಗೆ, ಮೈಸೂರುಪಾಕು, ಬೂಂದಿಲಾಡು, ಮನೋಹರ ತಯಾರಿಸಿ ಕೊಡುತ್ತಿದ್ದಳು. ಆಗೆಲ್ಲ ಸಲೀಲತ್ತೆಗೆ ಮಗಳಿಬ್ಬರೂ ಸಹಾಯಕ್ಕೆ ಒದಗುತ್ತಿದ್ದರು. ಉಳಿದ ದಿನಗಳಲ್ಲಿ ಪುಂಡಲೀಕನ ಅಂಗಡಿಯಾಚೆ ಇರುವ ಕಾಂಚಿಕಾ ಬೇಕರಿಗೆ ದಿನಾಲು ಬೆಳಿಗ್ಗೆ ಫ್ರೆಶ್ ಸ್ವೀಟ್ ಕೊಟ್ಟು ಬರುತ್ತಿದ್ದಳು. ಕೆಲಸಲ ಕಾಲೇಜಿಗೆ ಹೋಗುತ್ತಿದ್ದ ಅನಂತ ದಾರಿಯ ಮೇಲೆ ಸಿಗುವ ಬೇಕರಿಗೆ ಸ್ವೀಟ್ ಚೀಲ ಕೊಟ್ಟು ಹೋಗುತ್ತಿದ್ದ. ಇಂಥ ಸಣ್ಣಪುಟ್ಟ ಕೆಲಸ ಮಾಡಿದ ಕ್ಷಣ ಅನಂತನಿಗೆ ಮಾಸ್ತರ ಮನೆಯಲ್ಲಿ ಬಿಟ್ಟಿ ಉಣ್ಣಲಿಲ್ಲವಲ್ಲ ಎಂದು ಅಲ್ಪ ಸುಖವಿರಾಮ ದೊರೆಯುತ್ತಿತ್ತು.

ಅಕ್ಕುವನ್ನು ಚಿನ್ಮಕ್ಕಿಯ ಪಾಚಣ್ಣನಿಗೆ ಕಟ್ಟಿದ್ದು ಅವರು ಅರ್ಥ ಹೇಳಿದ ಅಸಂಗತ ಯಕ್ಷಗಾನ ಪ್ರಸಂಗದಂತೆ ಇತ್ತು. ಅನಂತ ಮೊದಲನೆ ವರ್ಷದ ಡಿಗ್ರಿ ಕ್ಲಾಸಿನಲ್ಲಿದ್ದ. ಪರೀಕ್ಷೆಯ ಕೊನೆಯ ಪೇಪರನ್ನು ಮುಗಿಸಿ ಮುಕ್ತಿಯ ಪರಮಾನಂದ ದೊರೆತ ದಿನ ಮಾಸ್ತರು ಅಕ್ಕುವನ್ನು ನೋಡುವ ಶಾಸ್ತ್ರಕ್ಕೆ ತಾರಿಬಾಗಿಲ ಅವರ ಮನೆಗೆ ಪಾಚಣ್ಣನನ್ನು ಕರೆದುಕೊಂಡು ಬಂದಿದ್ದರು. ಅಕ್ಕು ಅವಳಜ್ಜಿ ಮನೆಗೆ ಹೋಗಿದ್ದಳು; ಅನಂತ ಅವಳನ್ನು ಮಾಸ್ತರ ಸೈಕಲ್ ಮೇಲೆ ಡಬಲ್ ಸವಾರಿಯಲ್ಲಿ ಕರೆದುಕೊಂಡು ಬಂದಿದ್ದ; ಅದಾಗಲೇ ಪಾಚಣ್ಣ ನಲವತ್ತರ ಗಡಿ ದಾಟಿರಬೇಕು; ಉದ್ದ ಮೂಗಿನ ಮುಖಕ್ಕೆ ದೋಣಿ ಟೊಪ್ಪಿ ಮಜವಾಗಿತ್ತು; ಕ್ಷೌರ ಮಾಡಿದ ನುಣ್ಣನೆಯ ಹಳ್ಳಬಿದ್ದ ಕವಳುಗಳ ಮೇಲೆ ನಕಾಶೆಯ ನದಿಗಳು ಹರಿದಂತೆ ತಲಾ ಎರಡು ನೆರಿಗೆಗಳು; ಅಸಂಖ್ಯ ಮಡಿಕೆಗಳ ಹಳದಿ ಪೈರಾಣಂಗಿಯ ಮೇಲೆ ಹಳೆಯ ಕೋಟು; ಹಸುರು ಕಂಬಿಯ ಕಚ್ಚೆ ಹಾಕಲ್ಪಟ್ಟ ಧೋತ್ರ; ಕೂತೊಡನೆಯೇ ತುಸು ಡೊಗ್ಗು ಬಾಗಿ ತೂಗಿಕೊಳ್ಳುವ ರೂಢಿ; ಶುಭಕಾರ್ಯದ ಸಂಕೇತವಾಗಿ ಕೂಡು ಕಣ್ಣುಬ್ಬುಗಳ ನಡುವೆ ಮಂಗಲ ಬೊಟ್ಟು; ಸಾಕ್ಷಾತ್ ಕಂಪನಿ ನಾಟಕದವರ ಸಾಮಾಜಿಕ ನಾಟಕದ ಪಾತ್ರದ ವೇಷ. ಸರಿಸುಮಾರಾಗಿ ಪಂಡಿತರ ವಯಸ್ಸಿಗೆ ಹತ್ತಿರವಿದ್ದ ಪಾಚಣ್ಣ ಅಕ್ಕುವಿನ ಗಂಡನಾಗುವುದನ್ನು ಕಲ್ಪಿಸಲೂ ಆಗಲಿಲ್ಲ ಅನಂತನಿಗೆ. ವಿದುರನಾಗಿರುವ ಪಾಚಣ್ಣನಿಗೆ ಮನೆಯಲ್ಲಿ ಮದುವೆಯ ವಯಸ್ಸಿನ ಮಗಳಿದ್ದಾಳೆ! ಮಾಸ್ತರಿಗೆ ಹುಚ್ಚು ಹೆಚ್ಚಾಗಿ ಪಾಚಣ್ಣ ಯುವ ವರನಂತೆ ಭ್ರಮೆಯಾಯಿತೊ ಪಾಚಣ್ಣನಿಗೆ